ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04.10.2023.**

ಮುಂದುವರೆದ **ಪಾಟೀ ಸವಾಲು - 4** ನೇ **ಪ್ರತಿವಾದಿ ಪರ ವಕೀಲರಿಂದ**

12) ನಿಪಿ-22 ರಿಂದ ನಿಪಿ-28 ದಾಖಲೆಗಳು ಎಲ್ಲಿ ಇದ್ದವು ಮತ್ತು ಎಲ್ಲಿಂದ ತಂದು ಹಾಜರು ಮಾಡಿದ್ದೇನೆ ಎಂದರೆ ಅವು ಶಾಲಾ ದಾಖಲೆಗಳು. ಈ ದಾಖಲೆಗಳನ್ನು ನಾನು ಎಲ್ಲಿಂದ ತಂದೆ ಎಂದರೆ ಕಳೆದ ಬಾರಿ ಪಾಟೀ ಸವಾಲು ಮಾಡುವಾಗ ನೀವು (ಪಾಟೀ ಸವಾಲು ಮಾಡುತ್ತಿರುವ ವಕೀಲರು) ಕೇಳಿದ್ದರಿಂದ ಶಾಲೆಗೆ ಹೋಗಿ ಅವುಗಳನ್ನು ಪಡೆದು ತಂದಿದ್ದೇನೆ. ನಿಪಿ-20 ರಿಂದ ನಿಪಿ-22 ವ್ಯಾಸಂಗ ಪ್ರಮಾಣ ಪತ್ರಗಳಲ್ಲಿ ಇರುವ ಮಾಹಿತಿಯನ್ನು ಭರ್ತಿ ಮಾಡಲು ಯಾರು ಮಾಹಿತಿ ಕೊಟ್ಟರು ಎಂದರೆ ಶಾಲೆಯ ಹೆಡ್ ಮಾಸ್ಟರವರೇ ಬರೆದು ಕೊಟ್ಟರು. ಈ ದಾಖಲೆಗಳ ಮೇಲೆ ಸಹಿ ಮಾಡಿದವರೇ ನಾವು ಶಾಲೆಗೆ ಸೇರುವಾಗಲೂ ಹೆಡ್ ಮಾಸ್ಟರ್ ಆಗಿದ್ದರೇ? ಎಂದರೆ ಆಗಿರಲಿಲ್ಲ. ನಾವು ಶಾಲೆಗೆ ದಾಖಲಾಗುವಾಗ ನಮೂದಿಸಿರುವ ರಿಜಿಸ್ಟರ್ ನಲ್ಲಿ ಇರುವ ಮಾಹಿತಿಯನ್ನು ನೋಡಿ ಅವರು ನಮಗೆ ನಿಪಿ-20 ರಿಂದ ನಿಪಿ-22 ನ್ನು ಬರೆದುಕೊಟ್ಟಿದ್ದಾರೆ. ಸದರಿ ಶಾಲಾ ರಿಜಿಸ್ಟರ್ ನಲ್ಲಿರುವ ಮಾಹಿತಿಯನ್ನು ನೋಡಿ ಬರೆದುಕೊಟ್ಟಿದ್ದಾರೆ. ನಾನು ಆ ಶಾಲಾ ರಿಜಿಸ್ಟರ್ ನ್ನು ನೋಡಿದ್ದೀನಾ? ಎಂದರೆ ನೋಡಿದ್ದೇನೆ.

13) ನಿಪಿ-23 ರಿಂದ ನಿಪಿ-28 ದಾಖಲೆಗಳು ಯಾವ ದಾವಾ ಸ್ವತ್ತಿಗೆ ಸಂಬಂಧಿಸಿದೇ? ಎಂದರೆ ಸರ್ವೆ ನಂ.39 ಕ್ಕೆ ಸಂಬಂಧಪಟ್ಟಿರುತ್ತವೆ. ಸರ್ವೆ ನಂ.39 ನ್ನು ಸಹ್ಯಾದ್ರಿ ಹೆಲ್ತ್ ಕೇರ್ ಸೆಂಟರ್ & ಡೈಯಾಗ್ನಿಸ್ಟಿಕ್ ಸೆಂಟರ್ ರವರು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಈಗಲೂ ಸದರಿ ಐಟಂ ನಂ.1 ರಲ್ಲಿನ ಸರ್ವೆ ನಂ.39 ರಲ್ಲಿ ಪಾಲು ವಿಭಾಗ ಪರಿಹಾರ ಕೇಳುತ್ತಿದ್ದೇವೆಯೇ? ಎಂದರೆ ಹೌದು. ಸರ್ವೆ ನಂ.39 ರ Grant Order ನ್ನು ನಾನು ನೋಡಿದ್ದೀನಾ? ಎಂದರೆ ನೋಡಿದ್ದೇನೆ. ಸದರಿ Grant Certificate ನ್ನು ನಾನು ಹಾಜರು ಮಾಡಿದ್ದೇನೆ. ಸರ್ವೆ ನಂ.39 ನ್ನು ಮಾರಾಟ ಮಾಡಲು ಅನುಮತಿ ಕೋರಿ ಯಾರು ಯಾರು ಅರ್ಜಿ

ಕೊಟ್ಟಿದ್ದರು ಎಂದರೆ ನನ್ನ ತಾತನಾದ ಅಂಜಿನಪ್ಪ, ಮುನಿಶಾಮಪ್ಪ ಮತ್ತು ಮುನಿಶಾಮಪ್ಪನ ಮಕ್ಕಳು ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯ ನಕಲನ್ನು ನಾನು ಹಾಜರು ಮಾಡಿದ್ದೇನೆ. ನಾನು ಯಾವ ಕಾರಣಕ್ಕೆ ನಿಪಿ-23 ರಿಂದ ನಿಪಿ-28 ದಾಖಲೆಗಳು ಹಾಜರು ಮಾಡಿದ್ದೇನೆ ಎಂದರೆ ಹೋದ ಬಾರಿ ನೀವು ಪ್ರಶ್ನೆ ಕೇಳಿದ್ದರಿಂದ ಹಾಜರು ಮಾಡಿದ್ದೇನೆ. ನಮ್ಮ ಹಕ್ಕನ್ನು ಸಾಬೀತು ಮಾಡಲು ಈ ದಾಖಲೆಗಳು ಉಪಯೋಗವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**